ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ
ಸ್ಪೆಷಲ್ ಕೇಸ್ ನಂಃ 56/2016 ಪಿ.ಡಬ್ಲ್ಯುಃ 5

ಸಿ.ಡಬ್ಲ್ಯುಃ 19

| | |
|---|---|
| ಸಾಕ್ಷಿದಾರರ ಹೆಸರು | ಟಿ .ಜಿ. ಗುರುಪ್ರಸಾದ್ |
| ತಂದೆಯ ಹೆಸರು | ಟಿ.ಜಿ. ಗುರುಮಲ್ಲಪ್ಪ |
| ವಯಸ್ಸು | 60 ವರ್ಷ |
| ಉದ್ಯೋಗ | ನಿವೃತ್ತ ಸಹಾಯಕ ಕಮಿಷನರ್ |
| ವಿಳಾಸ | ಮೈಸೂರು |

ದಿನಾಂಕಃ 12-12-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ದಿಃ 16.07.2014 ರಿಂದ 12.08.2016 ರವರೆಗೆ ತಹಶೀಲ್ದಾರ್ ಉಡುಪಿ ಎಂದು ಕೆಲಸ ಮಾಡಿರುತ್ತೇನೆ.

2) ದಿನಾಂಕ 18-03-2015 ರಂದು ಬೆಳಿಗ್ಗೆ 5-15 ಗಂಟೆಗೆಮಣಿಪಾಲ ಪೊಲೀಸ್ ಠಾಣೆಯ ಠಾಣಾಧಿಕಾರಿ ಶ್ರೀ ಮಹೇಶಪ್ರಸಾದ್ ಚಾಸಾ -1 ಪೋನ್ ಮಾಡಿ ಮಣಿಪಾಲದ ಅಧಿತಿ ಅಪಾರ್ಟಮೆಂಟ್ ನಲ್ಲಿ ಮಾದಕ ವಸ್ತುವಿನ ಮಾರಾಟದ ಬಗ್ಗೆ ಖಚಿತ ಮಾಹಿತಿ ಇದ್ದು ತನಿಖೆಗೆ ಸಹಕರಿಸಲು ಪತ್ರಾಂಕಿತ ಅಧಿಕಾರಿ ಎಂದು ಬರಲು ಕೇಳಿಕೊಂಡಿರುತ್ತಾರೆ. ನಾನು ಬೆಳಗ್ಗಿನ 5-45 ಗಂಟೆಗೆ ಮಣಿಪಾಲ ಪೊಲೀಸ್ ಠಾಣೆಗೆ ಹೋಗಿ ತಲುಪಿದೆನು. ಅಲ್ಲಿ ಚಾಸಾ -1 ಪಂಚರಾದ ಚಾಸಾ -20 ಮತ್ತು 21 ಇವರನ್ನು ಪರಿಚಯಿಸಿದರು. ಚಾಸಾ -1 ನನಗೆ ಲಿಖಿತವಾಗಿ ಅದಿತಿ ಅಪಾರ್ಟಮೆಂಟ್ ನ ರೂಮ ನಂಬ್ರ 02 ರ ಮೇಲೆ ದಾಳಿ ಮಾಡುವುದು ಇದೆ ಎಂದು ತಿಳಿಸಿ ನಿಶಾನೆ ಪಿ -8 ರಂತೆ ನೋಟಿಸು ಕೊಟ್ಟಿರುತ್ತಾರೆ.

3) ನಂತರ ಠಾಣೆಯಿಂದ ನಾನು ನನ್ನ ಇಲಾಖಾ ವಾಹನದಲ್ಲಿ ಹಾಗೂ ಚಾಸಾ -1, 20 ಮತ್ತು 21 ಹಾಗೂ ಸಿಬ್ಬಂದಿಗಳು ಪೊಲೀಸ್ ವಾಹನದಲ್ಲಿ ಅದಿತಿ ಅಪಾರ್ಟಮೆಂಟ್ ಗೆ 5-50 ಗಂಟೆಗೆ ಮುಟ್ಟಿದೆವು. ಅಪಾರ್ಟಮೆಂಟ್ ನಲ್ಲಿರುವ ರೂಮ ನಂಬ್ರ 02 ರ ಕರೆಗಂಟೆಯನ್ನು ಒತ್ತಲಾಗಿ ಒಬ್ಬ ವ್ಯಕಿ ಬಾಗಿಲು ತೆಗೆದಿದ್ದು ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿತ

ಆತನೇ ಇರುತ್ತಾನೆ. ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು, ವಿಳಾಸ ಮೂಲ ಊರು ತಿಳಿಸಿದ್ದು ಅಲ್ಲದೆ ತಾನು ಎಂಐಟಿ ಯಲ್ಲಿ ಇಂಜಿನಿಯರ್ ಓದುತ್ತಿರುವುದಾಗಿ ತಿಳಿಸಿರುತ್ತಾನೆ. ನಾನು ಆರೋಪಿಗೆ ನಾನು ಪತ್ರಾಂಕಿತ ಅಧಿಕಾರಿ ಎಂದು ಪರಿಚಯಿಸಿಕೊಂಡು ನೀನು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ನಿನ್ನ ಕೋಣೆಯನ್ನು ಪರಿಶೀಲನೆ ಮಾಡಲು ಸಮ್ಮತಿ ಕೊಡಬೇಕೆಂದು ಕೇಳಿದ್ದು ಅದಕ್ಕೆ ಆರೋಪಿ ಒಪ್ಪಿಕೊಂಡಿರುತ್ತಾನೆ.

4) ಮನೆಯ ಒಳಗೆ ಹೋಗುವ ಮೊದಲು ನನ್ನ, ಚಾಸಾ -1, ಸಿಬ್ಬಂದಿಗಳು ಹಾಗೂ ಪಂಚರಾದ ಚಾಸಾ -20 ಮತ್ತು 21 ಇವರ ಅಂಗಶೋಧನೆ ಮಾಡಿ ನಮ್ಮ ನಿಷಿದ್ಧ ಮಾದಕ ವಸ್ತು ಇಲ್ಲ ಎಂದು ಖಚಿತಪಡಿಸಿಕೊಂಡೆವು, ನಂತರ ಆರೋಪಿಯ ಮಲಗುವ ಕೋಣೆಗೆ ಹೋಗಿ ಅಲ್ಲಿ ಇದ್ದ ಸ್ಟೀಲ್ ಕಪಾಟು ತೆಗೆದು ನೋಡಲಾಗಿ 50 ಗಾಂಜಾ ತುಂಬಿದ ಹಾಳೆಯಲ್ಲಿ ಕಟ್ಟಿದ್ದ ಪೊಟ್ಟಣಗಳನ್ನು ನೋಡಿದೆವು, ಅವುಗಳನ್ನು ಪ್ರತ್ಯೇಕವಾಗಿ ತೂಕ ಮಾಡಲಾಗಿ ಅವುಗಳು 12 ಗ್ರಾಂನಿಂದ 15 ಗ್ರಾಂಗಳ ಕೆಲವು ಪೊಟ್ಟಣಗಳು, 20 ರಿಂದ 25 ಗ್ರಾಂ ತೂಕದಕೆಲವು ಪೊಟ್ಟಣಗಳು ಇದ್ದದ್ದು ಕಂಡುಬಂದಿತು. ಸದರಿ 50 ಪೊಟ್ಟಣಗಳನ್ನು ಪ್ರತ್ಯೇಕವಾಗಿ ಬಿಳಿ ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಅರಗು ಸೀಲು ಹಾಕಿ, ಅದಕ್ಕೆ ನಮ್ಮ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿ ಎ-1 ರಿಂದ ಎ-50 ಎಂದು ಗುರುತಿಸಿತು. ಅದೇ ಕಬ್ಬಿಣದ ಕಪಾಟಿನಲ್ಲಿ ರೂಪಾಯಿ 5 ಸಾವಿರ ನಗದು ಇದ್ದು , ಆರೋಪಿಯು ಪ್ರತಿ ಪೊಟ್ಟಣವನ್ನು ರೂಪಾಯಿ 500 ಕ್ಕೆ ಮಾರಾಟ ಮಾಡಿದ್ದರಿಂದ ಬಂದ ಹಣ ಎಂದು ಹೇಳಿದ್ದು ಸದರಿ ಹಣವನ್ನು ಸಹ ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಅರಗು ಸೀಲು ಹಾಕಿ, ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿ ಬಿ ಎಂದು ಗುರುತಿಸಿತು. ಅದೇ ಕಪಾಟಿನಲ್ಲಿದ್ದ ಒಂದು ತೂಕದ ಯಂತ್ರವನ್ನು ಸಹ ಚಾಸಾ -1 ತನ್ನ ವಶಕ್ಕೆ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಅರಗು ಸೀಲು ಹಾಕಿ, ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿ, ಸಿ ಎಂದು ಗುರುತಿಸಿರುತ್ತಾರೆ. ಅದೇ ಕೋಣೆಯಲ್ಲಿದ್ದ ಮೇಜಿನ ಮೇಲೆ ಇದ್ದ ಒಂದು ಮೊಬೈಲ್ ಫೋನ್ ಅನ್ನು ಸಹ ಚಾಸಾ -1 ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಅರಗು ಸೀಲು ಹಾಕಿ, ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿ, ಡಿ ಎಂದು ಗುರುತಿಸಿರುತ್ತಾರೆ.

5) ಮನೆಯ ವರಾಂಡಕ್ಕೆ ಬಂದಾಗ ಅಲ್ಲಿ ಒಂದು ಎರಡು ಕುಂಡಗಳಲ್ಲಿ ಎರಡು ಗಾಂಜಾ ಗಿಡಗಳನ್ನು ಬೆಳೆದಿದ್ದು ಕಂಡುಬಂದಿತು. ಸದರಿ ಗಾಂಜಾ ಗಿಡಗಳನ್ನು ಬೇರು ಸಮೇತ ಕಿತ್ತು ,

ಹಾಳೆಯಲ್ಲಿ ಸುತ್ತಿ, ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಅರಗು ಸೀಲು ಹಾಕಿ, ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿ, ಎ-51 ಎಂದು ಗುರುತಿಸಿರುತ್ತಾರೆ.

6) ಅದೇ ಕೋಣೆಯಲ್ಲಿ ಹಾಜರಿದ್ದ ಚಾಸಾ -18 ಮತ್ತು ಆರೋಪಿಯ ಸ್ನೇಹಿತ ಚಾಸಾ -20 ಇವರಿಗೆ ಆರೋಪಿಯನ್ನು ಬಂಧಿಸಿದ ಬಗ್ಗೆ ತಿಳಿಸಿದ್ದು ಇರುತ್ತದೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಚಾಸಾ -1 ಬೆಳಗ್ಗಿನ 6 ಗಂಟೆಯಿಂದ 9-30 ಗಂಟೆಯವರೆಗೆ ಬೆರಳಚ್ಚು ಮಾಡಿ ಮುದ್ರಿಸಿ, ಪಂಚರ ಮತ್ತು ಚಾಸಾ -18 ಇವರ ಸಹಿ ಪಡೆದಿದ್ದು ನಾನು ಸಹ ಸಹಿ ಮಾಡಿರುತ್ತೇನೆ. ಈಗ ನೋಡಿದ ನಿಪಿ-1 ಅದೇ ಪಂಚನಾಮೆಯಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಿತು.

7) ಸದರಿ ದಿನ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ನಾನು ನೋಡಿದಲ್ಲಿ ಗುರುತಿಸಬಲ್ಲೆನು. ಈಗ ನೋಡಿದ ಎಂ.ಒ -1 ರಿಂದ 54 ಅವೇ ಇರುತ್ತವೆ. ಸದರಿ ಸಮಯದಲ್ಲಿ ದಾಳಿ ಪ್ರಕ್ರಿಯೆ ಕುರಿತು ಪೋಟೋಗಳನ್ನು ತೆಗೆದಿರುತ್ತದೆ. ಈಗ ನೋಡಿದ ನಿಪಿ-11 ರಿಂದ 14 ಅವೇ ಇರುತ್ತವೆ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ. ವಕೀಲರಿಂದ**

1) ಸದರಿ ದಿನ ಬೆಳಗ್ಗಿನ 5-45 ಗಂಟೆಗೆ ಚಾಸಾ -20 ಮತ್ತು 21 ಅನ್ನು ಮೊದಲ ಬಾರಿ ನೋಡಿರುತ್ತೇನೆ. ಸದರಿ ದಿನ ಬೆಳಗ್ಗಿನ ಸಮಯದಲ್ಲಿ ಚಾಸಾ -1 ಪೋನ್ ಮಾಡಿ ಕರೆದ ಬಗ್ಗೆ ನಾನು ಲಿಖಿತ ಟಿಪ್ಪಣಿ ಮಾಡಿರುವುದಿಲ್ಲ. ಸದರಿ ದಿನ ಸದರಿ ಸಮಯದಲಿ ನಾನು ಮಣಿಪಾಲ ಪೊಲೀಸ್ ಠಾಣೆಗೆ ಹೋಗಿ ಚಾಸಾ -1 ಈತನಿಗೆ ತನಿಖೆಯಲ್ಲಿ ಸಹಕರಿಸಿದ ಬಗ್ಗೆ ನನ್ನ ಕರ್ತವ್ಯದ ದಿನಚರಿಯಲ್ಲಿ ಬರೆದಿರುತ್ತೇನೆ. ದಿನಚರಿಯ ಉದ್ದರಿತ ಭಾಗದ ಯಥಾನಕಲನ್ನು ತನಿಖಾಧಿಕಾರಿಗೆ ಕೊಟ್ಟಿರುವುದಿಲ್ಲ. ಸದರಿ ದಿನ ಬೆಳಗ್ಗಿನ 6 ಗಂಟೆಯಿಂದ 9-30 ಗಂಟೆಯವರಗೆ ನಾವು ಅದಿತಿ ಅಪಾರ್ಟಮೆಂಟ್ ನಲ್ಲಿ ಇದ್ದೆವು. ಸದರಿ ದಿನ ನಾವು ದಾಳಿ ಮಾಡಿದ ಅಪಾರ್ಟಮೆಂಟ್ ಎಷ್ಟು ಮಹಡಿಗಳನ್ನು ಹೊಂದಿದೆ ಎಂದು ಈಗ ಹೇಳಲು ಬರುವುದಿಲ್ಲ , ಆದರೆ 3 ನೇ ಮಹಡಿಯಲ್ಲಿದ್ದ ಪ್ಲಾಟ್ ಗೆ ಹೋಗಿರುತ್ತೇವೆ. 3 ನೇ ಮಹಡಿಯಲ್ಲಿ ಎಷ್ಟು ಪ್ಲಾಟ್ ಗಳು ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಪಾರ್ಟಮೆಂಟ್ ನ ಯಾವ ದಿಕ್ಕಿನಲ್ಲಿ ದಾಳಿ ಮಾಡಿದ ಪ್ಲಾಟ್ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ.

2) ಸದರಿ ದಿನ ನಾನು ಪಂಚರ ಹಾಗೂ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಅಂಗಶೋಧನೆ ಮಾಡಿರುತ್ತೇನೆ. ನಿಪಿ-1 ರಂತೆ ಪಂಚನಾಮೆಯನ್ನು ನಾನೇ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿಸಿರುತ್ತೇನೆ. ಸದರಿ ದಿನ ಪಂಚರ ಮತ್ತು ಪೊಲೀಸರ ಅಂಗಶೋಧನೆ ಮಾಡಿದಾಗ ಕಂಡು ಬಂದ ವಸ್ತುಗಳ ಪಟ್ಟಿಯನ್ನು ಮಾಡಿರುವುದಿಲ್ಲ, ಅದರೆ ಮಾದಕ ವಸ್ತು ಇಲ್ಲ ಎಂದು ಖಚಿತಪಡಿಸಿಕೊಂಡಿರುತ್ತೇನೆ. ನಾನು ಆರೋಪಿಯಿಂದ ಆತನ ಮನೆಯ ಮತ್ತು ಅಂಗಶೋಧನೆಗೆ ಕೊಟ್ಟ ಸಮ್ಮತಿಯನ್ನು ಲಿಖಿತ ರೂಪದಲ್ಲಿ ಪಡೆದುಕೊಂಡಿರುವುದಿಲ್ಲ.

3) ಆರೋಪಿಯ ಮಲಗುವ ಕೋಣೆಯಲ್ಲಿನ ಕಬ್ಬಿಣದ ಕಪಾಟು ಯಾವ ದಿಕ್ಕಿನಲ್ಲಿ ಇತ್ತು ಎಂದು ಈಗ ಹೇಳಲು ಬರುವುದಿಲ್ಲ. ಸದರಿ ಕೋಣೆಯಲ್ಲಿನ ಮೇಜು ಯಾವ ದಿಕ್ಕಿನಲ್ಲಿ ಇತ್ತು ಎಂದು ನನಗೆ ಈಗ ಹೇಳಲು ಬರುವುದಿಲ್ಲ, ಆದರೆ ಮಹಜರಿನಲ್ಲಿ ಬರೆದಿರುತ್ತದೆ. ಸದರಿ ದಿನ ಮೇಜಿನ ಮೇಲೆ ಇದ್ದ ಮೊಬೈಲ್ ಪೋನ್ ಅನ್ನು ನಾನೇ ತೆಗೆದುಕೊಂಡು ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಎಂಒ -1 ರಿಂದ 54 ಇವುಗಳಿಗೆ ಅಂಟಿಸಿದ ಚೀಟಿಗಳ ಮೇಲೆ ಬರೆದಿರುವ ಮಾಹಿತಿಯನ್ನು ನಾನೇ ಪೊಲೀಸ್ ಸಿಬ್ಬಂದಿಗೆ ಹೇಳಿ ಬರೆಸಿರುತ್ತೇನೆ. ಸದರಿ ಮಾಹಿತಿಯನ್ನು ಬರೆದ ಪೊಲೀಸ್ ಸಿಬ್ಬಂದಿಯ ಹೆಸರು ಈಗ ನೆನಪಿರುವುದಿಲ್ಲ. ಸದರಿ ಗಾಂಜಾ ಪೊಟ್ಟಣಗಳ ತೂಕವನ್ನು ಪೊಲೀಸ್ ಸಿಬ್ಬಂದಿ ಮಾಡಿದ್ದು ಆತನ ಹೆಸರು ಈಗ ನೆನಪಿರುವುದಿಲ್ಲ.

4) ಗಾಂಜಾ ಗಿಡಗಳನ್ನು ಬೆಳೆಸಿದ್ದ ಕುಂಡಗಳನ್ನು ಇಟ್ಟ ವರಾಂಡ ಕೋಣೆಯ ಯಾವ ದಿಕ್ಕಿಗೆ ಇರುತ್ತದೆ ಎಂದು ಈಗ ಹೇಳಲು ಬರುವುದಿಲ್ಲ. ಸದರಿ ಮಹಡಿಯಲ್ಲಿ ಎಷ್ಟು ಪ್ಲ್ಯಾಟ್‌ಗಳು ಇರುತ್ತವೆ ಮತ್ತು ಅವುಗಳಲ್ಲಿ ಯಾರು ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಮಯದಲ್ಲಿ ಎಷ್ಟು ಪೋಟೋಗಳನ್ನು ತೆಗೆದಿರುವರು ಎಂದು ನನಗೆ ಗೊತ್ತಿರುವುದಿಲ್ಲ, ಪೋಟೋ ತೆಗೆದಾಗ ಅವುಗಳಲ್ಲಿ ನಾನು ಒಳಗೊಂಡಂತೆ ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ನಿಪಿ-11 ರಿಂದ 14 ನಾನು ಕಂಡುಬರುವುದಿಲ್ಲ. ನಿಪಿ-12 ಮತ್ತು 14 ರಲ್ಲಿ ಚಾಸಾ -20 ಮತ್ತು 21 ಸಹ ಕಂಡುಬರುವುದಿಲ್ಲ. ನಾವು ದಾಳಿ ಮಾಡಿದ ಸಮಯದಲ್ಲಿ ಅಪಾರ್ಟಮೆಂಟ್ ಗೆ ಸಿಸಿ ಕ್ಯಾಮರಾ ಅಳವಡಿಕೆ ಆಗಿರಲಿಲ್ಲ. ಸದರಿ ಅಪಾರ್ಟಮೆಂಟ್ ನ ಭದ್ರತಾ ಸಿಬ್ಬಂದಿಯ ಹೆಸರು ಹೇಳಲು ಬರುವುದಿಲ್ಲ. ಸದರಿ ಭದ್ರತಾ ಸಿಬ್ಬಂದಿಯನ್ನು ದಾಳಿ ಮಾಡುವ ಸಮಯಕ್ಕೆ ಸಹಕರಿಸಲು ಕರೆದಿರುವುದಿಲ್ಲ. ನಿಪಿ-11 ರಿಂದ 14 ಪೋಟೋಗಳನ್ನು ಠಾಣೆಯಲ್ಲಿ ತೆಗೆದಿದೆ ಎನ್ನುವುದು ಸರಿಯಲ್ಲ.

5) ಸದರಿ ದಿನ ಚಾಸಾ -1 ನನಗೆ ಫೋನ್ ಮಾಡಿ ಠಾಣೆಗೆ ಕರೆಯಲಿಲ್ಲ ಎನ್ನುವುದು ಸರಿಯಲ್ಲ. ನಾನು ಸದರಿ ದಿನ ಮಣಿಪಾಲ ಠಾಣೆಗೆ ಹೋಗಿಲ್ಲ ಮತ್ತು ನನಗೆ ಯಾವುದೇ ನೋಟಿಸು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಸದರಿ ದಿನ ಪ್ಲ್ಯಾಟ್ ಮೇಲೆ ದಾಳಿ ಮಾಡಿದಾಗ ಅಲ್ಲಿ ಇದ್ದ ಆರೋಪಿಗೆ ನೋಟಿಸು ಕೊಟ್ಟು ಒಪ್ಪಿಗೆ ಪಡೆದಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಎಂಒ – 1 ರಿಂದ 54 ಅನ್ನು ಸದರಿ ಪ್ಲ್ಯಾಟ್ ನಿಂದ ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ತಯಾರಿಸಿದ ದಾಖಲೆಗಳಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ದಿನ ಆರೋಪಿಯ ಪ್ಲ್ಯಾಟ್ ಗೆ ದಾಳಿ ಮಾಡಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಹೂಡಿರುವ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.

ಪಿ.ಡಬ್ಲ್ಯುಃ.5/ಸಿ.ಡಬ್ಲ್ಯುಃ19